# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

## ಓ ಎಸ್ ನಂ.99/2023

**ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಕಲೀಲ್ ಉಲ್ಲಾ<br>ಸೋಮೇಶ್ವರ ನಗರ, ಬೆಂಗಳೂರು |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ** 02.04.22026. |

**ಪಾಟೀ ಸವಾಲುಃ  ಶ್ರೀ  ಎಸ್ ಪಿ ಬಿ    ವಕೀಲರಿಂದಃ**

ದಿಃ06.03.2017 ರಂದು ನಾನು ಪ್ರತಿವಾದಿ 1 ರಿಂದ 4 ರವರಿಗೆ ದಾವಾ ಷಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ನೀಡಿರುತ್ತೇನೆ. ದಾವಾ ಷಡ್ಯೂಲ್ ಸ್ವತ್ತು ಸರ್ವೆ ನಂಃ 115/37 ರಲ್ಲಿ ವಿಸ್ತೀರ್ಣ 3 ಎಕರೆ ಜಮೀನು ಪ್ರತಿವಾದಿ 1 ರವರ ತಂದೆ ಸಂಗಣ್ಣರವರಿಗೆ ಸರ್ಕಾರದಿಂದ ಮಂಜೂರಾಗಿರುವ ಸ್ವತ್ತು ಎಂದರೆ ಸರಿ. ಮತ್ತು ಸದರಿ ಆಸ್ತಿಯು ಚಿಕ್ಕಣ್ಣರವರಿಗೆ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಪ್ರತಿವಾದಿ 1 ಮತ್ತು 2 ರವರ ಮಕ್ಕಳು ಅಂದರೆ 3 ಮತ್ತು 4 ನೇ ಪ್ರತಿವಾದಿಗಳು ಕ್ರಯ ಮಾಡುವ ಸಮಯದಲ್ಲಿ ಅಪ್ರಾಪ್ತ ವಯಸ್ಕರಾಗಿರುತ್ತಾರೆ ಆದರೆ ಅವರ ತಂದೆ ತಾಯಿ ನಾವು ಅವರ ಪರವಾಗಿ ಇದ್ದೇವೆ  ಎಂದು ಹೇಳಿರುತ್ತಾರೆ. 3 ಮತ್ತು 4 ನೇ ಪ್ರತಿವಾದಿಗಳು ಕ್ರಯ ಮಾಡುವಾಗ ಅಪ್ರಾಪ್ತರಾಗಿರಲಿಲ್ಲ ಮತ್ತು ಅವರು ಪ್ರಾಪ್ತ ವಯಸ್ಕಾಗಿರುತ್ತಾರೆಂದರೆ ಸರಿಯಲ್ಲ. ಪ್ರಾಪ್ತ ವಯಸ್ಕರಾದ ಕಾರಣ ನಿಮಗೆ ಅವರ ಸಹಿ ಪಡೆಯಲು ಯಾವುದಾದರೂ ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ಅವರ ತಂದೆ ತಾಯಿ ಅವರ ಪರವಾಗಿ ಇದ್ದ ಕಾರಣ ನಾವು ಅವರ ಸಹಿಯನ್ನು ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ.

2. ಕರಾರನ್ನು ಎರಡು ವರ್ಷಗಳ ವಾಯಿದೆ ಒಳಗೆ ಬರೆದುಕೊಡುವುದಕ್ಕೆ ನಾವು ತಯಾರ ಇರುತ್ತೇವೆಂದು ನಾನು ನನ್ನ ನೋಟೀಸಿನಲ್ಲಿ, ವಾದಪತ್ರ ಹಾಗೂ ಪ್ರಮಾಣಪತ್ರದಲ್ಲಿ ನಮೂದು ಮಾಡಿರುತ್ತೇನೆ. ನಿರ್ದಿಷ್ಟ ಎರಡು ವರ್ಷಗಳ ವಾಯಿದೆ ಒಳಗೆ ಬಂದು ಬರೆದುಕೊಡಿ ಎಂದು ಪ್ರತಿವಾದಿಗಳಿಗೆ ಯಾವುದೇ ಲಿಖಿತ ನೋಟೀಸ್‌ನ್ನು  ನನ್ನ ವಕೀಲರ ಮೂಲಕ ನೀಡಿರುವುದಿಲ್ಲ ಎಂದರೆ ಸರಿ. ದಿಃ12.01.2023 ರವರೆಗೆ ನಾವು ಕರಾರು ಮಾಡಿಕೊಡುವುದಕ್ಕೆ ತಯಾರು

ಆಗಿದ್ದೇವೆಂದು ವಕೀಲರ ಮೂಲಕ ಯಾವುದೇ ಲಿಖಿತ ನೋಟೀಸನ್ನು ನೀಡಿಲ್ಲ ಎಂದರೆ ಸರಿ. ಕರಾರು ಆದ ಆರು ವರ್ಷಗಳ ನಂತರ ನಾವು ನೋಟೀಸ್ ನೀಡಿರುತ್ತೀರಾಎಂಬ ಪ್ರಶ್ನೆಗೆ ನಾವು ಆರು ವರ್ಷಗಳ ಒಳಗೆ ನೋಟೀಸ್ ನೀಡಿರುತ್ತೇವೆ ಎಂದು ಸಾಕ್ಷಿ ನುಡಿಯುತ್ತಾರೆ.

3. ನಿಪಿ 2ರಲ್ಲಿ ಪ್ರತಿವಾದಿಗಳು ಯಾವುದೇ ಸಹಿಯನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ಬಿಕ್ಲಮ್ ದಾರರ ಅಥವಾ ಪತ್ರಬರಹಗಾರರ ಸಹಿ ಇರುವುದಿಲ್ಲ ಎಂದರೆ ಸರಿ.ನಿಪಿ 2 ರಲ್ಲಿ ಸಾಕ್ಷಿದಾರರು ಸಹಿ ಮಾಡಿಲ್ಲ ಮತ್ತು ಅದನ್ನು ನಾನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ನಿಪಿ 2 ರಲ್ಲಿ ಪ್ರತಿವಾದಿಯವರೇ ಸಹಿ ಮಾಡಿರುತ್ತಾರೆ ಎಂದು ಸಾಬೀತು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಾನು ಕರಾರನ್ನು ಸರಿಯಾದ ಅವಧಿಯೊಳಗೆ ಮಾಡದೇ ಇರುವ ಕಾರಣದಿಂದ ಈ ಕರಾರನ್ನು ನಾನೇ ಸೃಷ್ಟಿ ಮಾಡಿರುತ್ತೇನೆ ಮತ್ತು ಸಾಕ್ಷಿದಾರರ ಸಹಿಯನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ಸುಮಾರು ಆರು ವರ್ಷಗಳು ಕಳೆದ ಬಳಿಕ ದಿಃ12.01.2023 ರಲ್ಲಿ ನಿಪಿ 2 ನ್ನು ಸೃಷ್ಟಿ ಮಾಡಿ ವಕೀಲರ ಮೂಲಕ ಒಂದು ನೋಟೀಸ್ ಕಳುಹಿಸಿರುತ್ತೇನೆಂದರೆ ಸರಿಯಲ್ಲ. ವಕೀಲರ ಮೂಲಕ ನೋಟೀಸ್ ನೀಡಿದ ನಂತರ ವಾದಿಯವರು ನಿಪಿ 4 ರ ಮೂಲಕ ಸಮಂಜಸವಾಗಿ ಪ್ರತ್ಯುತ್ತರವನ್ನು ನೀಡಿರುತ್ತಾರೆಂದರೆ ಸರಿ. 2019-20 ರಲ್ಲಿ ಈ ಜಮೀನು ಮತ್ತು ಉಳಿದಂತಹ ಎಲ್ಲಾ ಜಮೀನನ್ನು ಸರ್ಕಾರವು ಒಟ್ಟುಗೂಡಿಸಿರುತ್ತದೆ ಎಂದರೆ ಸರಿಯಲ್ಲ. ಈ ಕಾರಣದಿಂದ ದಾವಾ ಷಡ್ಯೂಲ್ ಸ್ವತ್ತನ್ನು ಮಾರಲು ಯಾರಿಗೂ ಸಹ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. 2023-24, 2024-25ರ ಆರ್ ಟಿಸಿ ಗಳನ್ನು ನಾನು ನನ್ನ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. 2019-20 ರ ಆರ್ ಟಿ ಸಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಂದರೆ ಸರಿ. ಕ್ರಯಪತ್ರದಲ್ಲಿ ಪ್ರತಿವಾದಿ 3 ಮತ್ತು 4 ರವರು ಸಹಿ ಹಾಕದೇ ಇರುವ ಕಾರಣದಿಂದ ಮತ್ತು ಈ ಸ್ವತ್ತು ಪಿತ್ರಾರ್ಜಿತ ಆಸ್ತಿ ಅಗಿರುವ ಕಾರಣದಿಂದ ಪ್ರತಿವಾದಿ 3 ಮತ್ತು 4ರವರಿಗೆ ಈ ಪತ್ರ ಬದ್ಧಪಡಿಸುವುದಿಲ್ಲ ಎಂದರೆ ಸರಿಯಲ್ಲ. ಕಾಲಮಿತಿಯೊಳಗೆ ಕರಾರು ಆಗದೇ ಇರುವ ಕಾರಣದಿಂದ ನಿಮಗೆ ಪ್ರತಿವಾದಿಯವರು ಯಾವುದೇ ಹಣವನ್ನು ವಾಪಸ್ ನೀಡಲು ಬದ್ದರಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಕಾಲಮಿತಿಯೊಳಗೆ ಕ್ರಯಪತ್ರ ಬರೆಸಿಕೊಳ್ಳದೇ ಇರುವ ಕಾರಣದಿಂದ ವಾದಿಯವರು ನನಗೆ ಯಾವುದೇ ಹಣವನ್ನು ಅಥವಾ ಕ್ರಯಪತ್ರವನ್ನು ಮಾಡಿಕೊಡಲು ಬದ್ದರಲ್ಲ ಎಂದರೆ ಸರಿಯಲ್ಲ. ಹಾಗಾಗಿ ಈ ದಾವೆಯೂ ಕೂಡ ಊರ್ಜಿತವಲ್ಲ

ಎಂದರೆ ಸರಿಯಲ್ಲ. ಪ್ರತಿವಾದಿಗಳು ಈಗಲೂ ಸಹ ದಾವಾಸ್ತಿಯಲ್ಲಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ ನಾವು ಸ್ವಾಧೀನದಲ್ಲಿರುತ್ತೇವೆಂದು ಸಾಕ್ಷಿ ನುಡಿಯುತ್ತಾರೆ. ನಾವು ಸ್ವಾಧೀನದಲ್ಲಿದ್ದೇವೆಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**